ಪ್ರಸರಪಸಕ್ತಿ ಕಲ್ಪಿಸಿರುವ ಹಾಗೂ ಪರಿಹಾರ ಧನವನ್ನು ನೀಡಿರುವ ಬಗ್ಗೆ ವಿಶೇಷ ವರದಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀಮತಿ ಪ್ರಮೀಳಾ ನೇಸರ್ಗಿ (ಅಧ್ಯಕ್ಷರು, ಮಹಿಳಾ ಹಿತ್ತು ಮಕ್ಕಳ ಕಲ್ಯಾಣ ಸಮಿತಿ) : ಮಾನ್ಯ ಅಧ್ಯಕ್ಷರೆ, ಪ್ರಥಕೀಯ ಹಾಗೂ ನರ್ಸಿಂಗ್ ವಿದ್ಯಾರ್ಥಿನಿಲಯದ ಮಹಿಳಾ ನಿವಾಸಿಗಳ ಸಮಸ್ಯೆಗಳ ಬಗೆಗಿನ ವರದಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಮಂಡಿಸಲಾಯಿತು.

## ಅರ್ಜಿಗಳನ್ನೊಪ್ಪಿಸುವುದು

ಶ್ರೀ ಯು.ಜಿ. ಬಣಕಾರ್ (ಹಿರೇಕೆರೂರು ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಹಿರೇಕೆರೂರು ತಾಲ್ಲೂಕು ಪುರದ ಕೆರಿ ಗ್ರಾಮವನ್ನು ದಳ್ಳೂರು ಗ್ರಾಮ ಲೆಕ್ಕಾಧಿಕಾರಿಗಳ (ಸುಜಾತೆ) ವ್ಯಾಪ್ತಿಗೆ ಸೇರಿಸುವುದರ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಒಪ್ಪಿಸಲಾಯಿತು.

ಶ್ರೀ ಯು.ಜಿ. ಬಣಕಾರ್ : ಹಿರೇಕೆರೂರು ತಾಲ್ಲೂಕು ದಳ್ಳೂರಿನಲ್ಲಿ ಸ್ಥಾಪಿಸಲು ಯೋಜಿಸಿರುವ 68:11 ಕೆವಿ ಸಬ್ ಸ್ಟೇಷನ್ ಕಲಸ ಪ್ರಾರಂಭಿಸುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಒಪ್ಪಿಸಲಾಯಿತು.

ಶ್ರೀ ಜಗದೀಶ್ ಶೆಟ್ಟರ್ : ಬಂದ್ರ ಬದಾವಣೆಯಲ್ಲಿ ಸುಸಜ್ಜಿತ ಬಸ್ ನಿಲ್ದಾಣ ಹಾಗೂ ಬಂದ್ರ ಬದಾವಣೆಯಿಂದ ವಿವಿಧ ಬದಾವಣೆಗಳಿಗೆ ಬಸ್ ಮಾರ್ಗ ಸೌಲಭ್ಯ ಒದಗಿಸುವ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಒಪ್ಪಿಸಲಾಯಿತು.

ಅಧ್ಯಕ್ಷರು : ಮಾನ್ಯ ಡಿ. ಮಂಜುನಾಥರವರೆ, ಮೊನ್ನೆ ತಾವು ಫಟಕೋತ್ಕವಕ್ಕೆ ಹೋಗಿದ್ದಾಗ ಮಾನ್ಯ ಸದಸ್ಯರಾದ ಸುರೇಶ್ ಕುಮಾರರವರು ಬಂದು ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪವನ್ನು ಮಾಡಿದ್ದರು. ತಮ್ಮ ಡೈರಕ್ಟರೆಟ್ ಆಫ್ ಟೆಕ್ನಿಕಲ್ ಎಜುಕೇಷನಸಲ್ಲಿ ಯಾರೋ ಬ್ಬರು ಎಸ್.ಎಸ್.ಎಲ್.ಸಿ. ಅಷ್ಟೇ ವಿದ್ಯಾರ್ಹತೆ ಇರುವವರನ್ನು ಜಾಯಿಂಟ್ ಡೈರಕ್ಟರ್ ಆಗಿ ಮಾಡಿದ್ದಾರೆಂದು ಹೇಳಿದರು. ತಾವು ಬಂದಾಗ ಉತ್ತರವನ್ನು ಒದಗಿಸಿಕೊಡುತ್ತೇನೆಂದು ಹೇಳಿದ್ದೆ. ಅದಕ್ಕೆ ತಾವು ಉತ್ತರವನ್ನು ಈಗ ಹೇಳುವುದಿದ್ದರೆ ಹೇಳಬಹುದು.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ನಾನು ಮೊನ್ನೆನೇ ಸ್ಟಟಮೆಂಟ್ ಕೊಡುತ್ತೇನೆ ಎಂದು ಹೇಳಿ ನಾನು ರೆಡಿಯಾಗಿ ಬಂದಿದ್ದೆ. ಆ ದಿನ ಮಾನ್ಯ ಸುರೇಶ್ ಕುಮಾರರವರು